**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 456/2024

ಪಿಡಬ್ಲು :7 ಸಿಡಬ್ಲು :5

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ವೀರಬಸಪ್ಪ ಕಲಗುಡಿ |
| ಗಂಡನ ಹೆಸರು | : ಶ್ರೀ.ಸಿದ್ದಪ್ಪ |
| ವಯಸ್ಸು | : 53 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಹಣ್ಣಿಕೇರಿ |
| ದಿನಾಂಕ | : 26-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 4 ಯಲ್ಲಪ್ಪ ಜೋಳದ ನನಗೆ ಗೊತ್ತಿರುತ್ತಾರೆ. ವಿಡಿಯೋ ಕಾನ್ಫರೆನ್ಸ ಮುಖಾಂತರ ಹಾಜರಾಗಿರುವ ಆರೋಪಿ ನನಗೆ ಗೊತ್ತಿರುತ್ತಾರೆ. ಅವರು ನಮ್ಮ ಊರಿನವರು ಆದರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಚಾಸಾಃ 1 ಫಕೀರಪ್ಪ ಮತ್ತು ಅವರ ತಮ್ಮ ಮೃತ ಬಸಪ್ಪ ನನಗೆ ಗೊತ್ತಿರುವುದಿಲ್ಲ.

2. ಪೋಲಿಸರು ನನ್ನನ್ನು ಪಂಚನಾಮೆ ಮಾಡಲು ಕರೆಸಿರುವುದಿಲ್ಲ. ಎರಡು ವರ್ಷಗಳ ಹಿಂದೆ ಪೋಲಿಸರು ನನ್ನನ್ನು ನೇಸರಗಿ ಪೋಲಿಸ ಠಾಣೆಗೆ ಕರೆಸಿ ನನ್ನ ಹೆಬ್ಬಟ್ಟಿನ ಗುರುತನ್ನು ಹಾಕಿಸಿಕೊಂಡಿದ್ದಾರೆ. ನನ್ನ ಹೆಬ್ಬಟ್ಟಿನ ಗುರುತನ್ನು ಗುರುತಿಸಲು ಆಗುವುದಿಲ್ಲ. ನಾನು ಹೆಬ್ಬಟ್ಟಿನ ಗುರುತು ಹಾಕಿದ ದಾಖಲೆಯಲ್ಲಿ ಏನು ಬರೆಯಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಪೋಲಿಸ ಠಾಣೆಯನ್ನು ಹೊರತುಪಡಿಸಿ ಬೇರೆ ಎಲ್ಲೂ ನನ್ನನ್ನು ಕರೆಸಿರುವುದಿಲ್ಲ.

3. ನಿಪಿ–16 ರಿಂದ ನಿಪಿ–23 ರ ಪೋಟೋಗಳನ್ನು ನಮ್ಮ ಊರಿನಲ್ಲಿ ತೆಗೆದಿದ್ದಾರೆ ಆದರೆ ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಪೋಟೋಗಳಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ಮಾತ್ರ ಗುರುತಿಸಿದ್ದು ಉಳಿದ ವ್ಯಕ್ತಿಗಳು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ನಿಪಿ–24 ರಿಂದ ನಿಪಿ–29 ರ ಪೋಟೋಗಳನ್ನು ಎಲ್ಲಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನೇಸರಗಿ ಪೋಲಿಸರು ಸಾಕ್ಷಿಯಾಗಿ ಬರುವಂತೆ ನನಗೆ ನೋಟಿಸ ನೀಡಿದ್ದರು ಎನ್ನುವುದು ಸರಿಯಲ್ಲ. ನೋಟಿಸಿನ ಪ್ರಕಾರ ನಾನು ಠಾಣೆಗೆ ಹೋಗಿದ್ದೇನು ಎನ್ನುವುದು ಸರಿಯಲ್ಲ. ಆದರೆ ನಾನು ಠಾಣೆಗೆ ಹೋಗಿದ್ದೇನು. ಆ ಸಮಯದಲ್ಲಿ ಚಾಸಾಃ 4 ಫ್ರಾಸಾಃ 6 ಯಲ್ಲಪ್ಪ ಜೋಳದ ರವರು ಇದ್ದರು. ಆ ಸಮಯದಲ್ಲಿ ಡಿ.ವೈ.ಎಸ್. ಪಿ ರವರೂ ಸಹ ಇದ್ದರು

ಎನ್ನುವುದು ನನಗೆ ಗೊತ್ತಿಲ್ಲ. ಪೋಲಿಸರು ಆರೋಪಿಯನ್ನು ದಸ್ತಗಿರಿ ಮಾಡಿದ್ದು, ಆರೋಪಿ ಪೋಲಿಸ ಠಾಣೆಯಲ್ಲಿದ್ದನು ಎನ್ನುವುದು ನನಗೆ ಗೊತ್ತಿಲ್ಲ.

2. ಪೋಲಿಸರು ನನ್ನ ಸಮಕ್ಷಮ ಆರೋಪಿಯನ್ನು ವಿಚಾರಿಸಿದ್ದು, ಆರೋಪಿ ತಾನು ಬಸಪ್ಪ ಅವರನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ಆ ಸಮಯದಲ್ಲಿ ಧರಿಸಿದ ಬಟ್ಟೆ ಗಳನ್ನು ಮತ್ತು ಕೊಲೆ ಮಾಡಲು ಉಪಯೋಗಿಸಿದ ಆಯುಧಗಳನ್ನು ಬಚ್ಚಿಟ್ಟಿದ್ದು ಆತನನ್ನು ಕರೆದುಕೊಂಡು ಹೋದರೆ ಅವುಗಳನ್ನು ತೋರಿಸುತ್ತೇನೆ ಎಂದು ನನ್ನ ಸಮಕ್ಷಮ ಹೇಳಿದ್ದನು ಎನ್ನುವುದು ಸರಿಯಲ್ಲ.

3. ಅದರಂತೆ ಪೋಲಿಸರು ಜೀಪಿನಲ್ಲಿ ಆರೋಪಿಯನ್ನು ಮತ್ತು ನಮ್ಮಗಳನ್ನು ಒಂದು ಜೀಪಿನಲ್ಲಿ ಮತ್ತು ಇನ್ನೊಂದು ಜೀಪಿನಲ್ಲಿ ಪೋಲಿಸ ಸಿಬ್ಬಂದಿಯವರು ಮತ್ತು ಪೋಟೋಗ್ರಾಫರ್ ಅವರನ್ನು ಆರೋಪಿ ತೋರಿಸಿದ ಸ್ಥಳವಾದ ಹನಮನಟ್ಟಿ – ಹಣ್ಣಿಕೇರಿ ರಸ್ತೆಯ ಬದಿಯಲ್ಲಿರುವ ರುದ್ರಪ್ಪ ನರಸಪ್ಪ ಗೌಡರ ಇವರ ಜಮೀನು ಪಕ್ಕದ ಲೈಟ್ ಕಂಬದ ಬಳಿ ಕರೆದುಕೊಂಡು ಹೋಗಿ ಬಸಪ್ಪನನ್ನು ಕೊಲೆ ಮಾಡಲು ಉಪಯೋಗಿಸಿದ ಕುಡಗೋಲನ್ನು ಗಿಡಗಂಟೆಗಳ ಬಳಿ ಬಚ್ಚಿಟ್ಟಿದ್ದೇನೆ ಎಂದು ಹೇಳಿ ಆರೋಪಿ ಅದನ್ನು ತೆಗೆದುಕೊಟ್ಟನು ಎಂದು ಪೋಲಿಸರು ಅದನ್ನು ಸೀಲು ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು ಎನ್ನುವುದು ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಕುಡಗೋಲನ್ನು ಪ್ಯಾಕ ಮಾಡಿ ಜಪ್ತು ಮಾಡಿಕೊಂಡರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಿಪಿ–16, ನಿಪಿ–17, ನಿಪಿ–18, ನಿಪಿ–19, ನಿಪಿ–20, ನಿಪಿ–21, ನಿಪಿ–22 ಮತ್ತು ನಿಪಿ–23 ರವರೆಗೆ ಪೋಟೋಗಳನ್ನು ತೆಗೆಯಲಾಯಿತು ಎನ್ನುವುದು ಸರಿಯಲ್ಲ.

4. ಆರೋಪಿ ಬಸಪ್ಪನನ್ನು ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿ ಪೋಲಿಸರನ್ನು ಮತ್ತು ನಮ್ಮನ್ನು ಕರೆದುಕೊಂಡು ಹೋಗಿ ಮಲ್ಲಸರ್ಜ ಬಸವಣ್ಣೆಪ್ಪ ಇದ್ಲಿ ಅವರ

ಮನೆಯ ಮುಂದೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿದ್ದು, ಅಲ್ಲಿ ಪೋಲಿಸರು ನಿಪಿ–15 ರಂತೆ ಪಂಚನಾಮೆ ಮಾಡಿದರು ಎನ್ನುವುದು ಸರಿಯಲ್ಲ. ಆರೋಪಿ ಇದ್ಲಿ ಓಣಿಯಿಂದ ದ್ಯಾಮವ್ವನ ಗುಡಿ ರಸ್ತೆ ಹಿಡಿದು ಮುಂದೆ 500 ಮೀಟರ ಹೋಗಿ ಅಲ್ಲಿ ಒಂದು ಮನೆಯ ಮುಂದೆ ಕರೆದುಕೊಂಡು ಹೋಗಿ ಅದು ತನ್ನ ಮನೆ ಎಂದು ತೋರಿಸಿ ಮನೆಯ ಹಿಂಭಾಗದ ಹಿತ್ತಲಿಗೆ ಕರೆದುಕೊಂಡು ಹೋಗಿ ಅಲ್ಲಿ ಸಗಣಿ ಗುಂಡಿಯಲ್ಲಿ ಅರ್ಧ ಸುಟ್ಟಿದ್ದ ಒಂದು ಬನಿಯನ್‌ನ್ನು ಬಚ್ಚಿಟ್ಟಿದ್ದು ಅದನ್ನು ತೆಗೆದು ಪೋಲಿಸರಿಗೆ ನೀಡಿ ಅದನ್ನು ಬಸಪ್ಪನನ್ನು ಕೊಲೆ ಮಾಡುವ ಸಮಯದಲ್ಲಿ ತಾನು ಧರಿಸಿದ್ದನೆಂದು ಅದನ್ನು ನಾಶ ಮಾಡುವ ಸಲುವಾಗಿ ಸುಟ್ಟಿದ್ದನು ಎಂದು ಅದನ್ನು ಪೋಲಿಸರಿಗೆ ತೆಗೆದುಕೊಟ್ಟನು ಎನ್ನುವುದು ಸರಿಯಲ್ಲ. ಪೋಲಿಸರು ಅದನ್ನು ನನ್ನ ಸಮಕ್ಷಮ ತೆಗೆದುಕೊಂಡು ಪ್ಯಾಕ್ ಮಾಡಿ ಜಪ್ತು ಮಾಡಿದರು ಎನ್ನುವುದು ಸರಿಯಲ್ಲ.

5. ಆರೋಪಿ ಅವುಗಳನ್ನು ಹಾಜರು ಮಾಡುವ ಸಮಯದಲ್ಲಿ ನಿಪಿ–27 ರಿಂದ ನಿಪಿ–29 ಪೋಟೋಗಳನ್ನು ತೆಗೆಯಲಾಯಿತು ಎನ್ನುವುದು ಸರಿಯಲ್ಲ. ಆರೋಪಿ ತೋರಿಸಿದ ವಸ್ತುಗಳನ್ನು ಜಪ್ತು ಮಾಡಿಕೊಂಡು ಆಯಾ ಸ್ಥಳಗಳಲ್ಲಿ ನಿಪಿ–15 ರಂತೆ ಪಂಚನಾಮೆ ಮಾಡಿದ್ದು ನಾನು ಅದನ್ನು ತಿಳಿದುಕೊಂಡು ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ ಎನ್ನುವುದು ಸರಿಯಲ್ಲ.

6. ಈ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಆರೋಪಿ ನಮ್ಮ ಊರಿನವರಾಗಿದ್ದರಿಂದ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿಯ ಪರ ಶ್ರೀ.ಎಸ್.ಎನ್.ಪಿ ವಕೀಲರಿಂದ</u>**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.